ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಓದಿದೆ:**
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ7/1078/2000-01 ದಿನಾಂಕ: 22.09.2000
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ5ಎ/2103/2000-01 ದಿ: 03.11.2000, 22.06.2001, 03.03.2003, 29.05.2003, 26.11.2012, 29.06.2013, 08.08.2013 & 12.02.2016.
3. ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ: 07.08.2018.

---

**ಪ್ರಸ್ತಾವನೆ:**

ದಿನಾಂಕ:01.04.2006 ರಂದು ಅಥವಾ ನಂತರ ಸರ್ಕಾರದ ಸೇವೆಗೆ ನೇಮಕಾತಿ ಹೊಂದಿದ ನೌಕರರಿಗೆ 'ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ'(ಎನ್‌ಡಿಸಿಪಿಎಸ್)ಯನ್ನು ಅನುಷ್ಠಾನಗೊಳಿಸಿ ಕರ್ನಾಟಕ ಸರ್ಕಾರವು ದಿನಾಂಕ;31.03.2006 ರಂದು ಆದೇಶವನ್ನು ಜಾರಿಗೊಳಿಸಿದ್ದು, ಸರ್ಕಾರದ ಆದೇಶವನ್ನು ಕವಿಪ್ರನಿನಿಯು ಸಹ ಅಳವಡಿಸಿಕೊಂಡು ಅನುಷ್ಠಾನಗೊಳಿಸಿದೆ. 'ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ'ಯ ವ್ಯವಹಾರಗಳ ನಿರ್ವಹಣೆ, ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ನಿಗಮವು ದಿನಾಂಕ: 26.11.2012 ರ ಆದೇಶದಲ್ಲಿ ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.), ಕವಿಪ್ರನಿನಿ ರವರ ನಿಯಂತ್ರಣದಲ್ಲಿ 'ಕೆಇಎನ್‌ಡಿಸಿಪಿಎಸ್ ಘಟಕ' ವನ್ನು ರಚಿಸಿದೆ.

ಪ್ರಸ್ತುತದಲ್ಲಿ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ 'ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ'ಯಡಿಯಲ್ಲಿ 24,000 ನೌಕರರಿದ್ದು, ಭವಿಷ್ಯದಲ್ಲಿ ಸದ್ಯಕ್ಕೆ ತರಬೇತಿಯ ಅವಧಿಯಲ್ಲಿರುವ ಸುಮಾರು 15,000 ಕಿರಿಯ ಪವರ್ ಮೆನ್/ಕಿರಿಯ ಸ್ಟೇಷನ್ ಪರಿಚಾರಕರು ಮತ್ತು ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಹೊಸದಾಗಿ ನೇಮಕಾತಿ ಹೊಂದಿದ ಸುಮಾರು 2300 ನೌಕರರೂ ಸಹ ಯೋಜನೆಯಡಿಯಲ್ಲಿ ಬರಲಿದ್ದು, ಒಟ್ಟು ನೌಕರರ ಸಂಖ್ಯೆಯು 42,000 ನ್ನು ದಾಟಲಿದೆ. 'ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ'ಯ ಸಂಪೂರ್ಣ ಮೇಲ್ವಿಚಾರಣೆಯನ್ನು ಜೀವ ವಿಮಾ ನಿಗಮಕ್ಕೆ (ಎಲ್.ಐ.ಸಿ.) ವಹಿಸಲಾಗಿದ್ದು, ಈಗಾಗಲೇ ಮರಣ ಹೊಂದಿದ ಹಾಗೂ ರಾಜೀನಾಮೆ ನೀಡಿದ ಸುಮಾರು 450 ಪ್ರಕರಣಗಳು ಬಾಕಿಯಿದ್ದು, ಈ ಪ್ರಕರಣಗಳನ್ನು ಕೆಇಎನ್‌ಡಿಸಿಪಿಎಸ್ ಘಟಕವು ನಿರಂತರವಾಗಿ ಜೀವ ವಿಮಾ ನಿಗಮದೊಂದಿಗೆ ಪರಿಶೀಲಿಸಿ ಇತ್ಯರ್ಥಗೊಳಿಸಬೇಕಿರುತ್ತದೆ. ಪ್ರಸ್ತುತ, ಆರ್ಥಿಕ ಸಲಹೆಗಾರರು(ಪಿಂಚಣಿ ಮತ್ತು ಗ್ರಾಚ್ಯುಯಿಟಿ ಟ್ರಸ್ಟ್) ರವರು ಕೆಇಎನ್‌ಡಿಸಿಪಿಎಸ್ ಘಟಕದ ಮೇಲ್ವಿಚಾರಣೆಯನ್ನು ಪಿಂಚಣಿ & ಗ್ರಾಚ್ಯುಯಿಟಿ ಯೋಜನೆಯ ಕಾರ್ಯಗಳೊಂದಿಗೆ ನಿರ್ವಹಿಸುತ್ತಿದ್ದು, ಕೆಇಎನ್‌ಡಿಸಿಪಿಎಸ್ ಘಟಕದ ಕಾರ್ಯಗಳ ಪ್ರಮಾಣವು ಹೆಚ್ಚಾಗುತ್ತಿರುವುದರಿಂದ, ಕೆಇಎನ್‌ಡಿಸಿಪಿಎಸ್ ಘಟಕದ ಕಾರ್ಯಗಳನ್ನು ಪಿಂಚಣಿ ಮತ್ತು ಗ್ರಾಚ್ಯುಯಿಟಿ ಟ್ರಸ್ಟ್ ನಿಂದ ಬೇರ್ಪಡಿಸಿ, ಕೆಇಎನ್‌ಡಿಸಿಪಿಎಸ್ ಘಟಕದ ಕಾರ್ಯಗಳನ್ನು ಆರ್ಥಿಕ ಸಲಹೆಗಾರರು ಹುದ್ದೆಯ ದರ್ಜೆಯ ಅಧಿಕಾರಿಯು ಸ್ವತಂತ್ರವಾಗಿ ನಿರ್ವಹಿಸುವುದು ಅತ್ಯಾವಶ್ಯಕವೆಂದು ನಿಗಮವು ನಿರ್ಣಯಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ನಿಗಮ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ5ಎ/2103/2000-01**

**ಬೆಂಗಳೂರು, ದಿನಾಂಕ:** 16 AUG 2018

ನಿಗಮವು ಈ ಕೆಳಕಂಡ ವಿಷಯಗಳಿಗೆ ಅನುಮೋದನೆಯನ್ನು ನೀಡಿದೆ:

1. 'ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ'(ಕೆಇಎನ್‌ಡಿಸಿಪಿಎಸ್ ಸೆಲ್) ಘಟಕದ ಕಾರ್ಯಗಳನ್ನು 'ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್' ನಿಂದ ಬೇರ್ಪಡಿಸಿದ್ದು, ಕೆಇಎನ್‌ಡಿಸಿಪಿಎಸ್ ಘಟಕದ ಮೇಲ್ವಿಚಾರಣಾ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಒಂದು ಆರ್ಥಿಕ ಸಲಹೆಗಾರರು ಹುದ್ದೆಯನ್ನು ಹೊಸದಾಗಿ ಮಂಜೂರು ಮಾಡಿದ್ದು, ಸದರಿ ಹುದ್ದೆಯನ್ನು **'ಆರ್ಥಿಕ ಸಲಹೆಗಾರರು(ಎನ್‌ಡಿಸಿಪಿಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು'** ಎಂದು ಹೆಸರಿಸಿದೆ.

2. 'ಆರ್ಥಿಕ ಸಲಹೆಗಾರರು(ಎನ್‌ಡಿಸಿಪಿಎಸ್)' ರವರು ನಿರ್ದೇಶಕರು(ಆಡಳಿತ ಮತ್ತು ಮಾಸಂ.), ಕವಿಪ್ರನಿನಿ ರವರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

3. 'ಆರ್ಥಿಕ ಸಲಹೆಗಾರರು(ಎನ್‌ಡಿಸಿಪಿಎಸ್)' ರವರ ನೆರವಿಗಾಗಿ ಒಂದು ಆಪ್ತ ಕಾರ್ಯದರ್ಶಿ ಹುದ್ದೆಯನ್ನು ಹೊಸದಾಗಿ ಮಂಜೂರು ಮಾಡಿದೆ.

ಆದೇಶದ ಮೇರೆಗೆ,

'ವ್ಯವಸ್ಥಾಪಕ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ'

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)
ಕ.ವಿ.ಪ್ರ.ನಿ.ನಿ

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ ನಿರ್ದೇಶಕರು (ಹಣಕಾಸು), ಬೆವಿಸಕಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/ ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಮತ್ತು ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ./ಎಸ್ಕಾಂ ಪ.ಜಾ. /ಪ. ಪಂ.ಅಧಿಕಾರಿಗಳ ಸಂಘ, ಬೆಂಗಳೂರು